1. ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮ 1968.

2. ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮ 1967

3. ಸರ್ಕಾರದ ಸುತ್ತೋಲೆ ಸಂಖ್ಯೆ : ಎಫ್ ಡಿ : 131 : ಇ ಎಫ್ ಎಲ್ : 94 ದಿನಾಂಕ 20-12-95 ಮತ್ತು,

4. ಸಂ. ಎಫ್ ಡಿ : 18 : ಇ ಎಫ್ ಎಲ್ :97 ದಿನಾಂಕ 02-4-97

ಅ. ಸಾರಾಯಿ ಅಂಗಡಿ ಸನದನದು ಮಂಜೂರಾತಿ ಸಮಯದಲ್ಲಿ ಈ ಕೆಳಕಂಡ ನಿಯಮಗಳನ್ನು ಅನುಸರಿಸಲಾಗುತ್ತಿದೆ.

1. ಕರ್ನಾಟಕ ಅಬಕಾರಿ (ಸಾರಾಯಿ ಚಿಲ್ಲರೆ ಮಾರಾಟ ಮಾಡುವ ಹಕ್ಕಿನ ಗುತ್ತಿಗೆಯ) ನಿಯಮಗಳು 1969.

2. ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತು) ನಿಯಮ 1968.

ಇ) ಇಲ್ಲ

ಈ) <u>ನಿಗದಿಪಡಿಸಲಾದ ಸಮಯ</u>

ಬಾರ್ : ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 2.30 ರವರೆಗೆ, ಮತ್ತು ಸಂಜೆ 5.30 ಗಂಟೆಯಿಂದ ರಾತ್ರಿ 11.00 ಗಂಟೆಯವರೆಗೆ

ಮದ್ಯದಂಗಡಿ ಮತ್ತು ಸಾರಾಯಿ ಅಂಗಡಿ : ಬೆಳಿಗ್ಗೆ 9 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ

ಒಂದಂಕಿ, ಎರಡಂಕಿ ಇತ್ಯಾದಿ ಲಾಟರಿಗಳ ಮಾರಾಟವನ್ನು ನಿಷೇಧಿಸುವುದು

219 (270) ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ಲಾಟರಿ ವ್ಯವಸ್ಥೆಯನ್ನು ಎಂದಿನಿಂದ ಜಾರಿಗೆ ತರಲಾಗಿದೆ

ಆ) ಕಳೆದ 3 ವರ್ಷಗಳಲ್ಲಿ ಕರ್ನಾಟಕ ರಾಜ್ಯ ಲಾಟರಿಯಿಂದ ರಾಜ್ಯದ ಬೊಕ್ಕಸಕ್ಕೆ ಬಂದಿರುವ ಆದಾಯವೆಷ್ಟು?

ಇ) ರಾಜ್ಯದಲಿ ಮಾರಾಟ ಮಾಡಲ್ಪಡುತ್ತಿರುವ ಹೊರ ರಾಜ್ಯದ ಲಾಟರಿಗಳಿಂದ ರಾಜ್ಯದ ಬೊಕ್ಕಸಕ್ಕೆ ಬಂದಿರುವ ವರಮಾನವೆಷ್ಟು?

ಈ) ಒಂದಂಕಿ, ಎರಡಂಕಿ, ಮೂರಂಕಿ ಹಾಗೂ ದಿಡೀರ್ ಲಾಟರಿ (ಇನ್‌ಸ್ಟೆಂಟ್) ಲಾಟರಿಗಳ ಬಗ್ಗೆ ರಾಜ್ಯ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿಗಳು) :

ಅ) 1969 ನೇ ಸಾಲಿನಿಂದ

ಅ) (ಕೋಟಿ ರೂ.ಗಳಲ್ಲಿ)

1994-95		1995-96		1996-97	
ಒಟ್ಟು	ನಿವ್ವಳ	ಒಟ್ಟು	ನಿವ್ವಳ	ಒಟ್ಟು	ನಿವ್ವಳ
26.69	6.41	28.49	5.53	37.09	9.02

ಇ) ವರಮಾನ ಇರುವುದಿಲ್ಲ

ಈ) ಕೇಂದ್ರ ಸರ್ಕಾರವು ಹೊರಡಿಸಿರುವ (ನಿಯಂತ್ರಣ) ಆಧ್ಯಾದೇಶ 1997 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಬೇರೆ ರಾಜ್ಯಗಳಿಂದ ನಡೆಸಲ್ಪಡುವ ಎಲ್ಲ ಲಾಟರಿಗಳ ಟಿಕೇಟುಗಳ (ಒಂದಂಕಿ, ದಿಡೀರ್ ಲಾಟರಿಗಳೂ ಸೇರಿ) ಮಾರಾಟವನ್ನು ಕರ್ನಾಟಕದಲ್ಲಿ ದಿನಾಂಕ : 1-2-98 ರಿಂದ ನಿಷೇಧಿಸಿ ದಿನಾಂಕ : 22-1-98 ರಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ. ಈ ಅಧಿಸೂಚನೆಗೆ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ : 27-3-98 ರವರೆಗೆ ತಾತ್ಕಾಲಿಕ ತಡೆಯಾಜ್ಞೆ ನೀಡಿರುತ್ತದೆ.

ಕರ್ನಾಟಕ ರಂಗಾಯಣದ ಕಲಾವಿದರನ್ನು ಖಾಯಂಗೊಳಿಸುವುದು

220 (280) ಶ್ರೀ ಎಚ್. ಎನ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮೈಸೂರಿನ ಕರ್ನಾಟಕ ರಂಗಾಯಣಕ್ಕೆ ಪ್ರಾರಂಭದಿಂದ ನೀಡುತ್ತಾ ಬಂದಿರುವ ವಾರ್ಷಿಕ ಅನುದಾನವೆಷ್ಟು, (ವಾರ್ಷಿಕವಾರು ವಿವರ ಒದಗಿಸುವುದು)

ಆ) ಇಲ್ಲಿ ಕೆಲಸ ನಿರ್ವಹಿಸುತ್ತಿರುವ ಕಲಾವಿದರ ಸಂಖ್ಯೆ ಎಷ್ಟು ? ಹಾಗೂ ಇವರುಗಳು ಎಷ್ಟು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿರುವವರು?

ಇ) ಇವರುಗಳನ್ನು ಖಾಯಂ ಮಾಡುವ ಬಗ್ಗೆ ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀಮತಿ ಲೀಲಾದೇವಿ . ಆರ್. ಪ್ರಸಾದ್ (ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವೆಯರು) :

ಅ) ಮೈಸೂರಿನಲ್ಲಿ ರಂಗಾಯಣವನ್ನು 1988 ರಿಂದ ಪ್ರಾರಂಭಿಸಲಾಗಿದೆ

1987-88 ನೇ ಸಾಲಿನಿಂದ ರಂಗಾಯಣಕ್ಕೆ ಬಿಡುಗಡೆಯಾದ ವಾರ್ಷಿಕ ಅನುದಾನದ ವಿವರ

		ರೂ.ಗಳಲ್ಲಿ
1987-88	-	9.00 ಲಕ್ಷ
1988-89	-	ನೀಡಿಲ್ಲ
1989-90	-	15.00 ಲಕ್ಷ
1990-91	-	15.00 ಲಕ್ಷ
1991-92	-	14.40 ಲಕ್ಷ
1992-93	-	13.00 ಲಕ್ಷ